ಸಿ.ಸಿ ನಂಬ್ರ: 1111/2023
ಪಿ.ಡಬ್ಲ್ಯೂ : 1

ದಿನಾಂಕಃ 09-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಬಿ ಆರ್ ಎನ್ ವಕೀಲರಿಂದ

1. ನಾನು ಹಾಜರು ಪಡಿಸಿದ ಬ್ಯಾಂಕಿನ ಪಾಸ್ ಪುಸ್ತಕಗಳು ನನ್ನ ಕರೆಂಟ್ ಖಾತೆಗೆ ಸೇರಿದವು. ನಾನು ನನ್ನ ಕರೆಂಟ್ ಖಾತೆಯಲ್ಲಿ ಇದ್ದ ಮೊತ್ತಕ್ಕೆ ಬಡ್ಡಿ ಬರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಸದರಿ ಖಾತೆಯಲ್ಲಿನ ಎಲ್ಲಾ ಎಂಟ್ರಿಗಳನ್ನು ನೋಡಿ ನ್ಯಾಯಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಈ ದಾಖಲೆಯನ್ನು ಕೊಟ್ಟಿದ್ದು 1 ತಿಂಗಳ ಹಿಂದೆ ಎಂದರೆ ಸರಿ. ನಾನು ಈ ಪ್ರಕರಣವನ್ನು ಯಾವಾಗ ದಾಖಲಿಸಿರುತ್ತೇನೆ ಎಂದು ನೆನಪಿರುವುದಿಲ್ಲ. ಈಗ 4 ವರ್ಷಗಳ ಹಿಂದೆ ದಾಖಲಿಸಿರಬಹುದು. ಸರಿಯಾಗಿ ನೆನಪಿರುವುದಿಲ್ಲ. 2019 ರಲ್ಲಿ ಈ ಪ್ರಕರಣವನ್ನು ನಾನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಯಾವಾ ದಿನಾಂಕದಂದು ಹಣವನ್ನು ಕೊಡಲು ಪ್ರಾರಂಭಿಸಿದೆ ಎಂದು ನೆನಪಿರುವುದಿಲ್ಲ.

ಈ ಸಂದರ್ಭದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ